ಮೊದಲಹಂತವಾಗಿ ಈ ಸಂದರ್ಶನವನ್ನು ಏರ್ಪಡಿಸಲಾಗಿತ್ತು. ನೀವು ಯಾವ ಮತಸ್ಥರು, ನಿಮ್ಮ ಮತ ಯಾವುದು, ನೀವು ನಮೂದಿಸಿರುವ ಸಮುದಾಯಕ್ಕೂ ನಿಮ್ಮ ಹೆಸರು ಹಾಗೂ ಚಹರೆಗೂ ತಾಳೆ ಆಗುತ್ತಿಲ್ಲ, ನೀವು ಒದಗಿಸಿದ ಮಾಹಿತಿ ಸುಳ್ಳು ಎಂದು ಸಾಬೀತಾದಲ್ಲಿ ನಿಮ್ಮ ಮೇಲೆ ಕ್ರಿಮಿನಲ್ ದಾವೆ ಹೂಡುವ ಎಲ್ಲ ಹಕ್ಕುಗಳು ಕಂಪನಿಗಿವೆ ಎಂಬ ಸಂದರ್ಶನ ಸಮಿತಿಯ ಸದಸ್ಯರ ಒಂದಾದ ಮೇಲೊಂದು ಪ್ರಶ್ನೆಗಳಿಂದ ಪ್ರೇಮಚಂದ ವಿಚಲಿತನಾದ. ಉತ್ತರಿಸುವಾಗ ತಡವರಿಸಿದ. ತಂಪು ವಾತಾವರಣದಲ್ಲೂ ಹಣೆ ಮತ್ತು ಕುತ್ತಿಗೆಯ ಸುತ್ತ ಸಣ್ಣಗೆ ಬೆವರು ಜಿನುಗತೊಡಗಿತು.

ಪ್ರೇಮಚಂದನ ಮೌನಕ್ಕೆ ಪ್ರತಿಕ್ರಿಯೆಯಾಗಿ ಮಧ್ಯದ ಕುರ್ಚಿಯಲ್ಲಿ ಕುಳಿತ ವ್ಯಕ್ತಿ ಬಹುಶಃ ಸಂದರ್ಶನ ಸಮಿತಿಯ ಚೇರ್ಮನ್ ಇರಬಹುದು, ಆತ ಸಂದರ್ಶನವು ಅಂತಿಮ ಘಟಕ್ಕೆ ಬಂದಿರುವ ಸೂಚನೆಯೆಂಬಂತೆ ವಿವರಣೆ ನೀಡಿದ, 'ನೀವು ಸಮಿತಿಯ ಯಾವ ಪ್ರಶ್ನೆಗೂ ಉತ್ತರಿಸುತ್ತಿಲ್ಲ. ನಿಮ್ಮ ವರ್ತನೆ ಮತ್ತು ನೀವು ಒದಗಿಸಿದ ಮಾಹಿತಿ ಅನುಮಾನಾಸ್ಪದವಾಗಿ ಕಂಡುಬರುತ್ತಿದೆ. ಸಮಿತಿಯು ಮತ್ತೊಮ್ಮೆ ಸಭೆ ಸೇರಿ ನಿಮ್ಮನ್ನು ಕೆಲಸದಲ್ಲಿ ಮುಂದುವರೆಸಬೇಕೋ ಅಥವಾ ಬೇಡವೋ ಎನ್ನುವುದನ್ನು ನಿರ್ಧರಿಸಲಿದೆ. ಸಮಿತಿಯ ಅಂತಿಮ ನಿರ್ಧಾರದವರೆಗೂ ನೀವು ಕೆಲಸಕ್ಕೆ ಹಾಜರಾಗುವಂತಿಲ್ಲ. ಈ ಅವಧಿಯ ನಿಮ್ಮ ಗೈರುಹಾಜರನ್ನು ತಾತ್ಕಾಲಿಕ ರಜೆ ಎಂದು ಪರಿಗಣಿಸಲಾಗುವುದು. ನಿಮ್ಮ ನೌಕರಿಯ ವಿಷಯದಲ್ಲಿ ಆಡಳಿತ ಮಂಡಳಿಯದೇ ಅಂತಿಮ ನಿರ್ಧಾರ. ಯಾವುದಕ್ಕೂ ಇನ್ನೆರಡು ದಿನಗಳಲ್ಲಿ ಕಂಪನಿಯ ನಿರ್ಧಾರ ರಿಜಿಸ್ಟರ್ಡ್ ಪೋಸ್ಟ್ ಮೂಲಕ ನಿಮ್ಮ ಕೈಸೇರಲಿದೆ. ಗುಡ್‌ಲಕ್' ಎಂದು ಹೇಳಿ ಮಾತು ಮುಗಿಸಿದ.

★★★

'ನಿಮ್ಮ ಅಪ್ಪ ಮಾಡಿದ ಕಿತಾಪತಿಯಿಂದ ಈಗ ನಾವು ಅನುಭವಿಸಬೇಕಾಗಿ ಬಂದದ ನೋಡ್ರಿ. ಯಾಕ ಆ ವೆಂಕೋಬರಾಯಗ ಬೇರೆ ಯಾವ ಹೆಸರೂ ಸಿಗ್ಲಿಲ್ಲೇನು. ಇದೇ ಹೆಸರು ಬೇಕಾಗಿತ್ತೇನು. ತನಗೇನೋ ಕಥಿ ಮನಸ್ಸಿಗಿ ಹಿಡಿಸಿತು ಅಂತ ಆ ಕಥಿ ಬರೆದವನ ಹೆಸರು ನಿಮಗಿಟ್ಟು ಎಲ್ಲ ಹಾಳ್ಮಾಡಿ ಬಿಟ್ಟ. ನೀವೋ ಗುಡ್ಯಾಗ ಲಿಂಗದ ಎದುರು ಕೂತ ಬಸವಣ್ಣನಂಗ. ಅಪ್ಪ ಇಟ್ಟ ಹೆಸರಿಗಿ ಯಾವ ಕಳಂಕಾನೂ ಬರದಂಗ ವೆಂಕೋಬರಾಯನ ಮಾನ ಕಾಪಾಡ್ಲಿಕತ್ತಿರಿ. ಧೋಬಿ ಕಾ ಕುತ್ತಾ ನ ಘರ್ ಕಾ ನ ಘಾಟ್ ಕಾ ಅನ್ನೊಹಂಗ ಪರಿಸ್ಥಿತಿ ತಂದಿಟ್ಟೇರಿ. ನನ್ನ ಜೀವ ಅಂತೂ ಸೋತು ಸುಣ್ಣ ಆಗ್ಯಾದ. ಹಾಳಾದ ಹೆಸರು ಸುಟ್ಟು ಹೋಗಲಿ' ಕಂಪನಿಯ ಹೆಡ್ ಆಫೀಸಿನಿಂದ ಬಂದ ಪತ್ರ ಓದಿದ್ದೆ ಸರಳಾಬಾಯಿ ಗಂಡ ಪ್ರೇಮಚಂದನನ್ನು ತರಾಟೆಗೆ ತೆಗೆದುಕೊಂಡಿದ್ದಳು. ಸಂದರ್ಶನದ ನಾಲ್ಕು ದಿನಗಳ ಅನಂತರ ಕಂಪನಿಯ ಪತ್ರ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕೈಸೇರಿದಾಗ ಪ್ರೇಮಚಂದ ಮಧ್ಯಾಹ್ನದ ಊಟ ಮುಗಿಸಿ ಒಂದು ಸಣ್ಣ ನಿದ್ದೆ ತೆಗೆಯಲೆಂದು ಹಾಸಿಗೆಯ ಮೇಲೆ ಅಡ್ಡಾಗುವ ತಯ್ಯಾರಿಯಲ್ಲಿದ್ದ. ಅದೇಕೋ ಸಂದರ್ಶನದ ಅನಂತರ ನೌಕರಿಯಿಂದ ವಜಾಗೊಂಡೆ ಎಂದೇ ಭಾವಿಸಿದ್ದ ಪ್ರೇಮಚಂದನಲ್ಲಿ ಒಂದುರೀತಿಯ ನಿರಾಳತೆ ಮನೆಮಾಡಿತ್ತು. ಈ ನಾಲ್ಕು ದಿನಗಳನ್ನು ಅವನು ಯಾವ ಆತಂಕವಿಲ್ಲದೆ ಕಳೆದಿದ್ದರೂ ಸರಳಾಬಾಯಿ ಮಾತ್ರ ಕಂಪನಿಯಿಂದ ಬರಬೇಕಿದ್ದ ಪತ್ರಕ್ಕಾಗಿ ಕ್ಷಣವನ್ನು ಯುಗವಾಗಿಸಿ ಕಾಯ್ದಿದ್ದಳು. ಪತ್ರ ಓದಿದ್ದೆ ಸರಳಾಬಾಯಿ ತಲೆ ಮೇಲೆ ಕೈಹೊತ್ತು ಚಿಂತಾಕ್ರಾಂತಳಾಗಿ ಕುಳಿತಳು. ಪತ್ರ ಓದಿದ ಪ್ರೇಮಚಂದನಿಂದ ಯಾವ ಪ್ರತಿಕ್ರಿಯೆಯೂ ಬಾರದಿದ್ದಾಗ ಸಹಜವಾಗಿಯೇ ಕೋಪಗೊಂಡವಳು ಗಂಡನನ್ನು ತರಾಟೆಗೆ ತೆಗೆದುಕೊಂಡಿದ್ದಳು.

ಸಾರಂಶ ರೂಪದಲ್ಲಿ ಹೇಳುವುದಾದರೆ ಕಂಪನಿಯ ನಿರ್ಧಾರ ಹೀಗಿತ್ತು – 'ಕಂಪನಿಯ ಹೊಸ ಆಡಳಿತ ಮಂಡಳಿಯ ನಿಯಮಗಳಿಗೆ ಹೊಂದಿಕೊಳ್ಳಬಹುದಾದ ಮುಖಚಹರೆ ನಿಮಗಿಲ್ಲ. ನಿಮ್ಮ ಹೆಸರು, ನಿಮ್ಮ ಮುಖದ ಚಹರೆ ಮತ್ತು ನಿಮ್ಮ ಸಮುದಾಯ ಇವುಗಳ ನಡುವೆ ಯಾವ